ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

**ಸೆಷನ್ಸ್ ಕೇಸ್ ನಂಬ್ರ 34/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾ. ಹೆಚ್.ಎನ್. ವೆಂಕಟೇಶ್ ಪ್ರಸನ್ನ | ಫ್ರಾಸಾಃ 3 |
| ಗಂಡನ ಹೆಸರು | : | ಎಂ. ವಿ. ನರಸಿಂಹಮೂರ್ತಿ | ಚಾಸಾಃ 1 |
| ಫ್ರಾಯ | : | 53 ವರ್ಷ | **ದಿನಾಂಕಃ 29.12.2021** |
| ಉದ್ಯೋಗ | : | ಅಸಿಸ್ಟೆಂಟ್ ಡೈರೆಕ್ಟರ್, ಇಂಟೆಲಿಜೆನ್ಸ್ | ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ವಾಸಸ್ಥಳ | : | ಬೆಂಗಳೂರು. | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ನಾನು ಆಗಸ್ಟ್ 2008 ರಿಂದ ಆಗಸ್ 2011 ರ ವರೆಗೆ ಮಂಗಳೂರಿನ ಅಪರಾಧ ಪತ್ತೆ ದಳದಲ್ಲಿ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 03.10.2008 ರಂದು ಸರಣಿ ಬಾಂಬ್ ಪ್ರಕರಣಗಳಲ್ಲಿ ಭಾಗಿಯಾದಂತಹ ರಿಯಾಜ್ ಭಟ್ಕಳ ಎಂಬಾತನು ಉಳ್ಳಾಲದ ಮುಕ್ಕಚೇರಿಯಲ್ಲಿ ಒಂದು ಮನೆಯಲ್ಲಿ ಇದ್ದಾನೆ ಎಂಬ ಮಾಹಿತಿ ನನಗೆ ಬಂದಿತ್ತು. ಕಾರಣ ನಾನು ಚಾಸಾ.2 ರಿಂದ ಚಾಸಾ.4 ಇವರನ್ನು ಠಾಣೆಗೆ ಕರೆಸಿದ್ದೆನು. ನನ್ನ ಹಿರಿಯ ಅಧಿಕಾರಿಗಳ ಅನುಮತಿಯನ್ನು ಪಡೆದು, ನಾನು, ಚಾಸಾ.2 ರಿಂದ ಚಾಸಾ.4 ಹಾಗೂ ನನ್ನ ಸಿಬ್ಬಂದಿ ಚಾಸಾ.61 ರಿಂದ ಚಾಸಾ.64, ಚಾಸಾ.65 ರಿಂದ ಚಾಸಾ.73 ಇವರನ್ನು ಕರೆದುಕೊಂಡು ಬೆಳಿಗ್ಗೆ 6.45 ಗಂಟೆಗೆ ಉಳ್ಳಾಲದ ಮುಕ್ಕಚೇರಿಗೆ ಹೋಗಿದ್ದೆನು. ಮೊಹಮ್ಮದ್ ಅಲಿ ಎಂಬಾತನ ಮನೆಯನ್ನು ನಾವೆಲ್ಲರೂ ಸುತ್ತುವರೆದು ವಾಚ್ ಮಾಡುತ್ತಿದ್ದೆವು. ಆ ಮನೆಯಲ್ಲಿದ್ದ ಒಬ್ಬ ವ್ಯಕ್ತಿ ಹೊರಗೆ ಬಂದು ಒಳಗೆ ಹೋಗಿದ್ದನು.

3. ನಂತರ ನಾನು, ನನ್ನ ಸಿಬ್ಬಂದಿ ಆ ಮನೆಯ ಮುಂದೆ ಹೋಗಿ ಬೆಳಿಗ್ಗೆ 10.30 ಗಂಟೆಗೆ ಬಾಗಿಲನ್ನು ಬಡಿದಿದ್ದೇವೆ. ಆಗ ಮನೆಯ ಒಳಗಡೆ ಇದ್ದ ವ್ಯಕ್ತಿ ಬಾಗಿಲನ್ನು ತೆರೆದಿದ್ದನು. ನಾನು ಮನೆಯ ಒಳಗಡೆ ಹೋಗಿದ್ದೆನು. ಆ ಮನೆಯಲ್ಲಿ ಒಟ್ಟು ಇಬ್ಬರು ವ್ಯಕ್ತಿಗಳು ಇದ್ದರು. ಅವರ ಹೆಸರು, ವಿಳಾಸ ಕೇಳಿರುತ್ತೇನೆ. ಅವರೇ ಈ ಕೇಸಿನ 3 ನೇ ಆರೋಪಿ ಮೊಹಮ್ಮದ್ ಅಲಿ ಹಾಗೂ 4 ನೇ ಆರೋಪಿ ಜಾವೇದ್ ಅಲಿ ಇದ್ದಾರೆ. ಅವರಿಬ್ಬರೂ ನನಗೆ ರಿಯಾಜ್ ಭಟ್ಕಳ ಈತನು ತಮ್ಮ ಮನೆಗೆ ಬಂದಿದ್ದನು ಎಂದು ತಿಳಿಸಿದ್ದಾರೆ. ಆ ಮನೆಯನ್ನು ಪಂಚರ ಸಮ್ಮುಖದಲ್ಲಿ ಶೋಧನೆ ಮಾಡಿದ್ದೇನೆ. ಆ ಮನೆಯಲ್ಲಿ ಒಂದು ಕಂಪ್ಯೂಟರ್ ಸಿ.ಪಿ.ಯು., ಮೂರು ಪುಸ್ತಕಗಳು, 23 ಡಿ.ವಿ.ಡಿ.ಗಳು ದೊರೆತಿವೆ. ಅವುಗಳನ್ನು ನಾನು ಪಂಚರ ಸಮ್ಮುಖದಲ್ಲಿ ನಿಶಾನೆ ಪಿ-1 ರಂತೆ ಮಹಜರು ತಯಾರಿಸಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ನಿಪಿ-1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಮುಮಾ-1 ರಿಂದ ಮುಮಾ-4 ಹಾಗೂ ಮುಮಾ-15 ರಿಂದ ಮುಮಾ-21 ರಲ್ಲಿರುವ ಡಿ.ವಿ.ಡಿ. ಗಳನ್ನು ನಿಪಿ-1 ರ ಮೂಲಕ ವಶಪಡಿಸಿಕೊಂಡಿದ್ದೇನೆ ಎಂದು ಗುರುತಿಸಿದ್ದಾರೆ. ಸಾಕ್ಷಿ ಇನ್ನೊಂದು ಡಿ.ವಿ.ಡಿ.ಯನ್ನು ಗುರುತಿಸಿದ್ದು, ಅದನ್ನು ಸಹ ನಿಪಿ-1 ರ ಮೂಲಕ ವಶಪಡಿಸಿಕೊಂಡಿದ್ದೇನೆ ಎಂದು ಹೇಳಿದ್ದಾರೆ. ಆ ಡಿ.ವಿ.ಡಿ.ಯನ್ನು ಮುಮಾ-22 ಎಂದು ಗುರುತಿಸಲಾಯಿತು.

4. ನಿಪಿ-1 ರಲ್ಲಿ ಕಾಣಿಸಿದಂತಹ 23 ಡಿ.ವಿ.ಡಿ. ಗಳಲ್ಲಿ ಜಿಹಾದಿಯ ಕುರಿತು ಭಾಷಣಗಳು ಇರುತ್ತವೆ. ಅವುಗಳನ್ನು ನಾನು ವಶಪಡಿಸಿಕೊಂಡಾಗ ಕಂಪ್ಯೂಟರ್ ದಲ್ಲಿ ಹಾಕಿ ಕೇಳಿದ್ದೇನೆ. ನಾನು ಆ ಭಾಷಣದ ವಿವರವನ್ನು ಮಹಜರು ಮಾಡುವಾಗ ಅಥವಾ ನಂತರ ಪಟ್ಟಿ ಮಾಡಿರುವುದಿಲ್ಲ. (ಈಗ ಆ ಡಿ.ವಿ.ಡಿ. ಗಳನು ಪ್ಲೇ ಆಗುವುದಿಲ್ಲ. ಕಾರಣ ಸಾಕ್ಷಿಯ ಮೂಲಕ ಅವುಗಳನ್ನು ಪ್ಲೇ ಮಾಡಿ ತೋರಿಸಿರುವುದಿಲ್ಲ.)

5. 3 ಮತ್ತು 4 ನೇ ಆರೋಪಿತರು ನನಗೆ ರಿಯಾಜ್ ಭಟ್ಕಳ, ಮೊಹಮ್ಮದ್ ರಿಯಾಜ್ ಮತ್ತು ಮುದಸ್ಸಿರ್ ಯಾಸೀನ್ ಇವರ ಮನೆಗಳನ್ನು ತೋರಿಸುತ್ತೇನೆ ಎಂದು ನನಗೆ ಮಾಹಿತಿ ನೀಡಿದ್ದರು. 3 ಮತ್ತು 4 ನೇ ಆರೋಪಿತರು ನನ್ನನ್ನು, ಚಾಸಾ.2 ರಿಂದ ಚಾಸಾ.5 ಇವರನ್ನು 7 ನೇ ಆರೋಪಿ ರಿಯಾಜ್ ಭಟ್ಕಳ ಈತನು ವಾಸವಿದ್ದಾನೆ ಎಂದು ಹೇಳುವ ಮನೆಗೆ ಕರೆದುಕೊಂಡು ಹೋಗಿದ್ದರು. ಅವರು ನಮಗೆ ಚೆಂಬುಗುಡ್ಡೆ ಗ್ರಾಮದಲ್ಲಿದ್ದ ಮನೆಯನ್ನು ತೋರಿಸಿದ್ದಾರೆ. ಆ ಮನೆಯ ಹತ್ತಿರ ಮನೆಯ ಮಾಲಿಕನಾದ ಸುರೇಂದ್ರ ಪಾಂಡೇಶ್ವರ ಹಾಜರಿದ್ದನು. ಆ ಮನೆಯಲ್ಲಿ ಒಂದು ನೆಲಮಹಡಿ ಮತ್ತು ಮೊದಲನೇ ಮಹಡಿ ಇದ್ದವು. ನೆಲಮಹಡಿಯಲ್ಲಿ ಬೇರೆ ಬಾಡಿಗೆದಾರರು ವಾಸ ಇದ್ದರು. ಮೊದಲನೇ ಮಹಡಿಯಲ್ಲಿ 7 ನೇ ಆರೋಪಿ ವಾಸ ಇದ್ದನು ಎಂದು 3 ಮತ್ತು 4 ನೇ ಆರೋಪಿತರು ಹೇಳಿದ್ದಾರೆ. ಆ ಮನೆಗೇ ಬೀಗ ಹಾಕಲಾಗಿತ್ತು. ನಾನು ಆ ಬೀಗವನ್ನು ಪಂಚರ ಸಮ್ಮುಖದಲ್ಲಿ ಮುರಿದಿರುತ್ತೇನೆ. ಆ ಮನೆಯನ್ನು ಶೋಧನೆ ಮಾಡಿದ್ದೇನೆ.

6. ಆ ಮನೆಯಲ್ಲಿ ಒಟ್ಟು 10 ಮೊಬೈಲ್ ಗಳು, 5 ಜೀವಂತ ಬಾಂಬುಗಳು ದೊರೆತಿವೆ. ಬಾಂಬುಗಳನ್ನು ನಿಷ್ಕ್ರಿಯಗೊಳಿಸಲು ತಜ್ಞರನ್ನು ಆ ಮನೆಗೆ ಕರೆಸಿದ್ದೆನು. ನಾನು 10 ಮೊಬೈಲ್ ಗಳನ್ನು ಮಹಜರು ಮಾಡಿ ವಶಪಡಿಸಿಕೊಂಡಿದ್ದೇನೆ. ಬಾಂಬುಗಳನ್ನು ತಜ್ಞರು ನಿಷ್ಕ್ರಿಯಗೊಳಿಸಿದ್ದಾರೆ. ಆ ನಂತರ 5 ಜೀವಂತ ಬಾಂಬುಗಳನ್ನು ವಶಪಡಿಸಿಕೊಂಡಿದ್ದೇನೆ. ಸಾಕ್ಷಿ ಆ ಮಹಜರು ನಿಶಾನೆ ಪಿ-2 ರಲ್ಲಿ ಇದೆ ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಮುಮಾ-5 ರಿಂದ ಮುಮಾ-14 ರಲ್ಲಿರುವ 10 ಮೊಬೈಲ್ ಗಳನ್ನು ಗುರುತಿಸಿದ್ದಾರೆ. ನಾನು 5 ಜೀವಂತ ಬಾಂಬುಗಳನ್ನು ತಜ್ಞರಿಗೆ ಅದೇ ಸ್ಥಳದಲ್ಲಿ

ಹಸ್ತಾಂತರಿಸಿದ್ದೇನೆ.

7. ನಂತರ 3 ಮತ್ತು 4 ನೇ ಆರೋಪಿತರು ನನ್ನನ್ನು, ಚಾಸಾ.6 ರಿಂದ ಚಾಸಾ.8 ಇವರನ್ನು 1 ನೇ ಆರೋಪಿ ಸೈಯ್ಯದ್ ಮೊಹಮ್ಮದ್ ನೌಶಾದ್ ಈತನ ಮನೆಗೆ ಕರೆದುಕೊಂಡು ಹೋಗಿದ್ದರು. ಆ ಮನೆ ಮಂಗಳೂರಿನ ಸುಭಾಷ್ ನಗರದಲ್ಲಿ ಇತ್ತು. ಆ ಮನೆ ತೆರೆದಿತ್ತು. ಆ ಮನೆಯಲ್ಲಿ 1 ಮತ್ತು 2 ನೇ ಆರೋಪಿತರು ಹಾಜರಿದ್ದರು. ಆ ಮನೆಯನ್ನು ನಾನು ಶೋಧನೆ ಮಾಡಿದ್ದೇನೆ. ಆ ಮನೆಯಲ್ಲಿ ಒಂದು ಸಿ.ಪಿ.ಯು., ಒಂದು ಭೂಪಟ, ಎರಡು ಡೈರಿಗಳು, ಒಂದು ಪುಸ್ತಕ, ಎಲೆಕ್ಟ್ರಿಕಲ್ ಸರ್ಕ್ಯೂಟ್, 1 ನೇ ಆರೋಪಿಯ ಪಾಸ್ ಪೋರ್ಟ್, ಆತನ ಚುನಾವಣಾ ಗುರುತಿನ ಚೀಟಿ, ಆತನ ಕೆನರಾ ಬ್ಯಾಂಕಿನ ಪಾಸ್ ಪುಸ್ತಕ, ಆತನ ಕೆನರಾ ಬ್ಯಾಂಕಿನ ಚೆಕ್ ಪುಸ್ತಕ, ಮೋಟಾರುಸೈಕಲ್ ದೊರೆತಿರುತ್ತವೆ. ನಾನು ಅವುಗಳನ್ನು ಪಂಚರ ಸಮ್ಮುಖದಲ್ಲಿ ವಶಪಡಿಸಿಕೊಂಡಿರುತ್ತೇನೆ. ವಶಪಡಿಸಿಕೊಳ್ಳುವಾಗ ಮಹಜರು ಮಾಡಿದ್ದೇನೆ. ಸಾಕ್ಷಿ ಆ ಮಹಜರು ಗುರುತಿಸಿದ್ದು, ಅದನ್ನು ನಿಶಾನೆ ಪಿ-3 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿ 1) ಸಿ.ಪಿ.ಯು., 2) ಎಲೆಕ್ಟ್ರಿಕಲ್ ಸರ್ಕ್ಯೂಟ್, 3) 1 ನೇ ಆರೋಪಿಯ ಚುನಾವಣಾ ಗುರುತಿನ ಚೀಟಿ, 4) ಆತನ ಕೆನರಾ ಬ್ಯಾಂಕಿನ ಚೆಕ್ ಪುಸ್ತಕ ವನ್ನು ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಮುಮಾ23 ರಿಂದ ಮುಮಾ-26 ಎಂದು ಗುರುತಿಸಲಾಯಿತು. ಸಾಕ್ಷಿ ಬೈಕಿನ 4 ಛಾಯಾಚಿತ್ರಗಳನ್ನು ಗುರುತಿಸಿದ್ದು ಅವುಗಳನ್ನು ಒಟ್ಟುಗೂಡಿಸಿ ನಿಶಾನೆ ಪಿ-4 ಎಂದು ಗುರುತಿಸಲಾಯಿತು.

8. ಅದೇ ದಿನ 3 ಮತ್ತು 4 ನೇ ಆರೋಪಿತರು ನನ್ನನ್ನು, ಚಾಸಾ.6 ರಿಂದ ಚಾಸಾ.8 ಇವರನ್ನು 9 ನೇ ಆರೋಪಿ ಮುದಸ್ಸಿರ್ ಯಾಸೀನ್ ಈತನ ಮನೆಗೆ

ಕರೆದುಕೊಂಡು ಹೋಗಿದ್ದರು. ಆ ಮನೆಗೆ ಬೀಗ ಹಾಕಲಾಗಿತ್ತು. ಆ ಬೀಗವನ್ನು ನಾನು ಪಂಚರ ಸಮ್ಮುಖದಲ್ಲಿ ಒಡೆದಿರುತ್ತೇನೆ. ಆ ಮನೆಯನ್ನು ಶೋಧನೆ ಮಾಡಿದ್ದೇನೆ. ಆ ಮನೆಯಲ್ಲಿ 1) ಒಂದು ಲ್ಯಾಪ್ ಟಾಪ್, 2) ವಿ.ಸಿ.ಡಿ., 3) ಎರಡು ಲಾಂಗ್ ಪುಸ್ತಕಗಳು, 4) 9 ನೇ ಆರೋಪಿಯ 7 ಶಾಲಾ ದಾಖಲೆಗಳು ಇದ್ದ ಒಂದು ಫೈಲ್, 5) ಗುಜರಾತ್ ಮತ್ತು ರಾಜಸ್ಥಾನ ರಾಜ್ಯಗಳ ಭೂಪಟ, 6) ಪೋತಿಲಾಲ್ ಯಾಸೀನ್ ಮತ್ತು ಯಾಸೀನ್ ಹಾಜಿ ರಜಾಕ್ ಇವರ ಪಾಸ್ ಪೋರ್ಟ್ ಗಳು, 7) 9 ನೇ ಆರೋಪಿಯ ಚಾಲನಾ ಪತ್ರ, 8) 5 ಬ್ಯಾಂಕಿನ ಪಾಸ್ ಪುಸ್ತಕಗಳು, 9) 6 ಚೆಕ್ ಪುಸ್ತಕಗಳು, 10) 4 ಸಿ.ಡಿ. ಗಳು, 11) 4 ವಿ.ಸಿ.ಡಿ. ಗಳು, 12) 115 ಜಿಹಾದಿ ಸಿ.ಡಿ. ಗಳು (ಬ್ಯಾಗ್ ನೊಂದಿಗೆ), 13) ಇಂಟೆಲ್ ಕಂಪನಿಯ ಸಿ.ಪಿ.ಯು., ಇವುಗಳು ದೊರೆತಿವೆ. ಅವುಗಳನ್ನು ನಾನು ಮಹಜರು ಮಾಡಿ ವಶಪಡಿಸಿಕೊಂಡಿದ್ದೇನೆ. ಸಾಕ್ಷಿ ಮಹಜರು ಗುರುತಿಸಿದ್ದು, ಅದನ್ನು ನಿಶಾನೆ ಪಿ-5 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮೇಲೆ ಹೇಳಿದ ಎಲ್ಲಾ ಮುದ್ದೆಮಾಲುಗಳನ್ನು ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಮುಮಾ27 ರಿಂದ ಮುಮಾ-50 ಎಂದು ಗುರುತಿಸಲಾಯಿತು.

9. ನಾನು ನಿಪಿ-5 ರಲ್ಲಿರುವ ಮಹಜರು ಮಾಡುವಾಗ ಆ ಮನೆಯಲ್ಲಿ ಸಿಕ್ಕ ರೂ.11,39,850/- ನಗದನ್ನು, ಸೈಯ್ಯದ್ ಮೊಹಮ್ಮದ್ ಇರ್ಷಾದ್, ಮಾಪೂಸಾ ಯಾಸೀನ್ ಇವರ ಪಾಸ್ ಪೋರ್ಟ್ ಗಳನ್ನು ವಶಪಡಿಸಿಕೊಂಡಿದ್ದೇನೆ. ಸಾಕ್ಷಿ ಆ ಎರಡೂ ಪಾಸ್ ಪೋರ್ಟ್ ಗಳ ಪ್ರತಿಗಳನ್ನು ಗುರುತಿಸಿದ್ದು, ಅವುಗಳನ್ನು ನಿಶಾನೆ ಪಿ-6 ಮತ್ತು ನಿಶಾನೆ ಪಿ-7 ಎಂದು ಗುರುತಿಸಲಾಯಿತು.

10. ಅದೇ ದಿನ ಸುರೇಂದ್ರ ಈತನು ನನಗೆ 9 ನೇ ಆರೋಪಿಯ ಹೆಸರಿನಲ್ಲಿರುವ ಬಾಡಿಗೆಪತ್ರದ ಪ್ರತಿಯನ್ನು ನೀಡಿರುತ್ತಾನೆ ಸಾಕ್ಷಿ ಆ ಪ್ರತಿಯನ್ನು ಗುರುತಿಸಿದ್ದು, ಅದನ್ನು ನಿಶಾನೆ ಪಿ-8 ಎಂದು ಗುರುತಿಸಲಾಯಿತು. ದಿನಾಂಕ 03.10.2008 ರಂದು ನಾನು ಉಳ್ಳಾಲ ಪೊಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿದ್ದೇನೆ. ಸಾಕ್ಷಿ ಆ ದೂರಿನ ಪ್ರತಿಯನ್ನು ಗುರುತಿಸಿದ್ದು, ಅದನ್ನು ನಿಶಾನೆ ಪಿ-9 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ದಿನಾಂಕ 03.10.2008 ರಂದು ನಾನು 3 ಮತ್ತು 4 ನೇ ಆರೋಪಿತರನ್ನು ದಸ್ತಗಿರಿ ಮಾಡಿದ್ದೇನೆ. ನಂತರ 1 ರಿಂದ 4 ನೇ ಆರೋಪಿತರನ್ನು ನಾನು ಠಾಣಾಧಿಕಾರಿಯ ಮುಂದೆ ಹಾಜರುಪಡಿಸಿದ್ದೇನೆ. ನಾನು ವಶಪಡಿಸಿಕೊಂಡಂತಹ ಎಲ್ಲಾ ಮುದ್ದೆಮಾಲುಗಳನ್ನು ಮತ್ತು ಮಹಜರುಗಳನ್ನು ಠಾಣಾಧಿಕಾರಿಯ ಮುಂದೆ ಹಾಜರುಪಡಿಸಿದ್ದೇನೆ.

11. ದಿನಾಂಕ 16.10.2008 ರಂದು ಬೋಳಂತೂರಿನಲ್ಲಿ 5 ನೇ ಆರೋಪಿ/ಮೊಹಮ್ಮದ್ ರಫೀಕ್ ಈತನನ್ನು ವಶಕ್ಕೆ ಪಡೆದಿದ್ದೇನೆ. 6 ನೇ ಆರೋಪಿ/ಫಕೀರ್ ಅಹಮ್ಮದ್ ಈತನನ್ನು ಅದೇ ದಿನ ಮಳೂರು ಎಂಬಲ್ಲಿ ವಶಕ್ಕೆ ಪಡೆದಿದ್ದೇನೆ. ಆ ಇಬ್ಬರೂ ಆರೋಪಿತರನ್ನು ಉಳ್ಳಾಲ ಪೊಲೀಸ್ ಠಾಣೆಯ ಠಾಣಾಧಿಕಾರಿಯ ಮುಂದೆ ಹಾಜರುಪಡಿಸಿದ್ದೇನೆ. ನಾನು ಅವರಿಗೆ ವರದಿ ಸಲ್ಲಿಸಿದ್ದೇನೆ.

12. (ರೂ.4,27,850/- ನಗದು ನ್ಯಾಯಾಲಯದ ಟ್ರೆಸರಿ ಬಾಕ್ಸ್ ದಲ್ಲಿ ಇರುತ್ತದೆ. ಅದನ್ನು ಗುರುತಿಸುವ ಕುರಿತು ತಕರಾರು ಇಲ್ಲ ಎಂದು 10 ನೇ ಆರೋಪಿ ಪರ ವಕೀಲರು ತಿಳಿಸಿರುತ್ತಾರೆ. ಉಳಿದ ನಗದನ್ನು ಈಗಾಗಲೇ ಬ್ಯಾಂಕಿಗೆ ಜಮಾ

ಮಾಡಲಾಗಿದೆ. ಈ ನಗದು ಹಣವನ್ನು ಸರಕಾರಿ ಅಭಿಯೋಜಕರು ಗುರುತಿಸಲು ವಿನಂತಿಸಿದ್ದಾರೆ. ಆ ಹಣವನ್ನು ಈ ದಿನದಂದು ಖಜಾನೆಯಿಂದ ತರದೇ ಇದ್ದುದರಿಂದ ಮತ್ತು ಆ ಕುರಿತು 10 ನೇ ಆರೋಪಿಯ ಯಾವುದೇ ತಕರಾರು ಇರದೇ ಇರುವುದರಿಂದ ಆ ಹಣವನ್ನು ಮುದ್ದೆಮಾಲನ್ನಾಗಿ ಗುರುತಿಸಿರುವುದಿಲ್ಲ.)

<u>ಪಾಟೀ ಸವಾಲುಃ 10 ನೇ ಆರೋಪಿ ಪರ ವಕೀಲರಿಂದಃ</u>

13. ನಾನು ದೂರನ್ನು ನೀಡಿದಾಗ 10 ನೇ ಆರೋಪಿ ಖಯಾಮುದ್ದೀನ್ ಈ ಪ್ರಕರಣದಲ್ಲಿ ಭಾಗಿಯಾದ ಕುರಿತು ನನಗೆ ಯಾವುದೇ ಮಾಹಿತಿ ಇರಲಿಲ್ಲ. ನಾನು ದೂರನ್ನು ಕೊಟ್ಟ ನಂತರ ಈ ಕೇಸಿನ ತನಿಖೆಯನ್ನು ಮಾಡಿರುವುದಿಲ್ಲ.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.